All India Radio: Bangalore
National Bulletin In Kannada
12.08.2026 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
12.08.2026 7.35 am

<>><><*><><<>

ಮುಖ್ಯಾಂಶಗಳು

೧. ರಾಷ್ಟ್ರೀಯ ಗೌರವಕ್ಕೆ ಅಪಮಾನ ತಡೆ ತಿದ್ದುಪಡಿ ಮಸೂದೆ-೨೦೨೬ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ

೨. ರಾಜ್ಯಸಭೆಯಲ್ಲಿ ಇಂದು ಕೇರಳ ಹೆಸರು ಬದಲಾವಣೆ ಮಸೂದೆ-೨೦೨೬ ಮಂಡಿಸಲಿರುವ ಕೇಂದ್ರ ಸಚಿವ ಅಮಿತ್ ಶಾ

೩. ಪ್ರಸಕ್ತ ಸಾಲಿನ ನಿವ್ವಳ ನೇರ ತೆರಿಗೆ ಸಂಗ್ರಹ ೮.೧೧ ಲಕ್ಷ ಕೋಟಿ ರೂಪಾಯಿಗೆ ಏರಿಕೆ; ಶೇಕಡಾ ೨೩ ರಷ್ಟು ಹೆಚ್ಚಳ

೪. ಪಾಲಿಕೆಗಳಿಗೆ ಆರ್ಥಿಕ ವರದಿ ಸಲ್ಲಿಕೆ ಅವಧಿ ವಿಸ್ತರಿಸಿದ ಬಂಡವಾಳ ಮಾರುಕಟ್ಟೆ ನಿಯಂತ್ರಣಾ ಸಂಸ್ಥೆ - ಸೆಬಿ

೫. ಕಾಮನ್‌ವೆಲ್ತ್ ಫೆನ್ಸಿಂಗ್ ಚಾಂಪಿಯನ್‌ಶಿಪ್; ಎರಡನೇ ದಿನವೂ ಪದಕ ಬೇಟೆ ಮುಂದುವರಿಸಿದ ಭಾರತ

<>><><*><><<>

ರಾಷ್ಟ್ರೀಯ ಗೌರವಕ್ಕೆ ಅಪಮಾನ ತಡೆ ತಿದ್ದುಪಡಿ ಮಸೂದೆ-೨೦೨೬ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ ಹಾಕಿದ್ದಾರೆ. ಸಂಸತ್ತು ಕಳೆದ ತಿಂಗಳು ಈ ಮಸೂದೆಯನ್ನು ಅಂಗೀಕರಿಸಿತ್ತು. ಇದರಿಂದ ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆ ಕಾಯ್ದೆ-೧೯೭೧ ಕ್ಕೆ ತಿದ್ದುಪಡಿ ತರಲಾಗಿದೆ. ಈ ಕಾನೂನಿನ ಮೂಲಕ ರಾಷ್ಟ್ರಗೀತೆಯಾದ ಜನಗಣಮನಕ್ಕೆ ಇರುವಂತೆಯೇ ರಾಷ್ಟ್ರೀಯ ಗೀತೆ ವಂದೇ ಮಾತರಂಗೂ ಕಾನೂನುಬದ್ಧ ರಕ್ಷಣೆ ಕಲ್ಪಿಸಲಾಗಿದೆ. ರಾಷ್ಟ್ರಪತಿಯವರ ಅಂಕಿತದೊಂದಿಗೆ ಮಸೂದೆ ಇದೀಗ ಕಾನೂನಾಗಿ ಜಾರಿಗೆ ಬಂದಿದೆ. ಕಾಯ್ದೆಯ ಸೆಕ್ಷನ್ ೩ರ ಅಡಿಯಲ್ಲಿ ನೀಡಲಾಗಿರುವ ರಕ್ಷಣೆಯನ್ನು ವಂದೇ ಮಾತರಂಗೂ ವಿಸ್ತರಿಸಲಾಗಿದ್ದು, ರಾಷ್ಟ್ರಗೀತೆಗೆ ಇರುವಂತೆಯೇ ಸಮಾನ ಕಾನೂನು ಸ್ಥಾನಮಾನ ನೀಡಲಾಗಿದೆ. ವಂದೇ ಮಾತರಂ ಗೀತೆಯನ್ನು ಹಾಡುವುದನ್ನು ಉದ್ದೇಶಪೂರ್ವಕವಾಗಿ ತಡೆಯುವುದು ಅಥವಾ ಅದನ್ನು ಹಾಡುತ್ತಿರುವ ಸಭೆಯ ಕಲಾಪಕ್ಕೆ ಅಡ್ಡಿಪಡಿಸುವುದು ಇನ್ನು ಮುಂದೆ ಅಪರಾಧವಾಗಲಿದೆ.

<>><><*><><<>

ಕೇರಳಂ ರಾಜ್ಯದ ಹೆಸರನ್ನು ಬದಲಾಯಿಸುವ 'ಕೇರಳ ಹೆಸರು ಬದಲಾವಣೆ ವಿಧೇಯಕ-೨೦೧೯' ಅನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಂದು ರಾಜ್ಯಸಭೆಯಲ್ಲಿ ಪರ್ಯಾಲೋಚನೆ ಹಾಗೂ ಅಂಗೀಕಾರಕ್ಕಾಗಿ ಮಂಡಿಸಲಿದ್ದಾರೆ. ಈ ವಿಧೇಯಕಕ್ಕೆ ಲೋಕಸಭೆಯು ಈಗಾಗಲೇ ನಿನ್ನೆ ಅಂಕಿತ ಹಾಕಿದೆ. ಇದರೊಂದಿಗೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ತಿದ್ದುಪಡಿ ವಿಧೇಯಕ-೨೦೧೯ ಸಹ ಇಂದು ರಾಜ್ಯಸಭೆಯ ಮುಂದೆ ಬರಲಿದೆ. ಮತ್ತೊಂದೆಡೆ, ಲೋಕಸಭೆಯಲ್ಲಿ 'ಗಣಿ ಮತ್ತು ಖನಿಜ ಅಭಿವೃದ್ಧಿ ಮತ್ತು ನಿಯಂತ್ರಣ ತಿದ್ದುಪಡಿ ವಿಧೇಯಕ-೨೦೧೯' ಅನ್ನು ಮಂಡಿಸಿ ಅಂಗೀಕರಿಸುವ ಸಾಧ್ಯತೆಯಿದೆ. ವಿವಿಧ ವಿಷಯಗಳ ಕುರಿತು ವಿಪಕ್ಷಗಳು ನಡೆಸಿದ ಗದ್ದಲದ ನಡುವೆಯೂ ನಿನ್ನೆ ಲೋಕಸಭೆಯು 'ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ತಿದ್ದುಪಡಿ ವಿಧೇಯಕ' ಹಾಗೂ ರಾಜ್ಯಸಭೆಯು 'ನ್ಯಾಯಮಂಡಳಿಗಳ ಸುಧಾರಣಾ ವಿಧೇಯಕ-೨೦೧೯' ಅನ್ನು ಅಂಗೀಕರಿಸಿದವು.

<>><><*><><<>

ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಪ್ರಸಕ್ತ ಸಾಲಿನಲ್ಲಿ ದೇಶದ ನಿವ್ವಳ ನೇರ ತೆರಿಗೆ ಸಂಗ್ರಹಣೆಯು ಶೇಕಡಾ ೨೩.೦೬ ರಷ್ಟು ಗಮನಾರ್ಹ ಏರಿಕೆ ಕಂಡು, ಆಗಸ್ಟ್ ೧೦ ರ ವೇಳೆಗೆ ೮.೧೧ ಲಕ್ಷ ಕೋಟಿ ರೂಪಾಯಿಗೆ ತಲುಪಿದೆ. ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಅಧಿಕೃತ ಅಂಕಿಅಂಶಗಳ ಪ್ರಕಾರ, ಇದೇ ಅವಧಿಯಲ್ಲಿ ಒಟ್ಟು ನೇರ ತೆರಿಗೆ ಸಂಗ್ರಹವು ಶೇಕಡಾ ೧೬.೯೫ ರಷ್ಟು ಹೆಚ್ಚಾಗಿ ೬.೫೫ ಲಕ್ಷ ಕೋಟಿ ರೂಪಾಯಿಗೆ ತಲುಪಿದ್ದು, ತೆರಿಗೆದಾರರಿಗೆ ೧.೪೩ ಲಕ್ಷ ಕೋಟಿ ರೂಪಾಯಿ ಮೊತ್ತದ ಮರುಪಾವತಿ ಮಾಡಲಾಗಿದೆ. ನಿವ್ವಳ ಕಾರ್ಪೊರೇಟ್ ತೆರಿಗೆ ಸಂಗ್ರಹವು ೨.೯೦ ಲಕ್ಷ ಕೋಟಿ ರೂಪಾಯಿಗೆ ಹಾಗೂ ಕಾರ್ಪೊರೇಟೇತರ ತೆರಿಗೆ ಸಂಗ್ರಹವು ೫.೦೯ ಲಕ್ಷ ಕೋಟಿ ರೂಪಾಯಿಗೆ ಏರಿಕೆಯಾಗಿದೆ. ಜೊತೆಗೆ ಸೆಕ್ಯೂರಿಟೀಸ್ ವಹಿವಾಟು ತೆರಿಗೆಯಿಂದ ಬಂದ ಆದಾಯವೂ ೩೩ ಸಾವಿರದ ೮೨೩.೯೪ ಕೋಟಿ ರೂಪಾಯಿಗೆ ಹೆಚ್ಚಳವಾಗಿದೆ. ಮತ್ತೊಂದೆಡೆ, ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಸರ್ಕಾರದ ನಿವ್ವಳ ತೆರಿಗೆ ಆದಾಯ ೯.೪ ಲಕ್ಷ ಕೋಟಿ ರೂಪಾಯಿಗೆ ಹೆಚ್ಚಿದ್ದರೂ, ವೆಚ್ಚಗಳ ಏರಿಕೆಯಿಂದಾಗಿ ಹಣಕಾಸು ಕೊರತೆಯು ೩.೧ ಲಕ್ಷ ಕೋಟಿ ರೂಪಾಯಿಗೆ ತಲುಪಿದೆ. ಇದು ಇಡೀ ವರ್ಷದ ಆಯವ್ಯಯ ಅಂದಾಜಿನ ಶೇಕಡಾ ೧೮.೨ ರಷ್ಟಾಗಿದೆ.

<>><><*><><<>

ಸಾಲ ಪತ್ರಗಳನ್ನು ಪಟ್ಟಿ ಮಾಡಿರುವ ಪುರಸಭೆಗಳು ಹಾಗೂ ಮಹಾನಗರ ಪಾಲಿಕೆಗಳು ಶೇರು ಮಾರುಕಟ್ಟೆಗೆ ಆರ್ಥಿಕ ಫಲಿತಾಂಶಗಳನ್ನು ಸಲ್ಲಿಸಲು ನೀಡಲಾಗಿದ್ದ ಗಡುವನ್ನು ಬಂಡವಾಳ ಮಾರುಕಟ್ಟೆ ನಿಯಂತ್ರಣ ಸಂಸ್ಥೆ- ಸೆಬಿ ಸಡಿಲಗೊಳಿಸಿದೆ. ಸರಿಪಡಿಸಲಾದ ನೂತನ ನಿಯಮಾವಳಿಗಳ ಪ್ರಕಾರ, ಮಹಾನಗರ ಪಾಲಿಕೆಗಳು ತಮ್ಮ ಅರ್ಧವಾರ್ಷಿಕ ಲೆಕ್ಕಪರಿಶೋಧನೆಯಾಗದ ಆರ್ಥಿಕ ವರದಿಯನ್ನು ೪೫ ದಿನಗಳ ಬದಲಾಗಿ ೯೦ ದಿನಗಳ ಒಳಗಾಗಿ ಸಲ್ಲಿಸಬಹುದಾಗಿದೆ. ಇದರ ಜೊತೆಗೆ ವಾರ್ಷಿಕ ಲೆಕ್ಕಪರಿಶೋಧನೆಯಾದ ಆರ್ಥಿಕ ವರದಿಯನ್ನು ೯೦ ದಿನಗಳ ಬದಲಾಗಿ ಹಣಕಾಸು ವರ್ಷಾಂತ್ಯದ ೬೦ ದಿನಗಳ ಒಳಗಾಗಿ ಆಡಿಟ್ ವರದಿಯೊಂದಿಗೆ ಸಲ್ಲಿಸಲು ಅವಕಾಶ ನೀಡಲಾಗಿದೆ.

ವಿವಿಧ ಇಲಾಖೆಗಳ ನಡುವಿನ ಸಮನ್ವಯ ಮತ್ತು ಮಾಹಿತಿ ಸಂಗ್ರಹಣೆಯಲ್ಲಿ ಪಾಲಿಕೆಗಳು ಎದುರಿಸುತ್ತಿರುವ ಪ್ರಾಯೋಗಿಕ ಸವಾಲುಗಳನ್ನು ಪರಿಗಣಿಸಿ 'ಸೆಬಿ' ಈ ಗಡುವನ್ನು ವಿಸ್ತರಿಸಿದೆ.

<>><><*><><<>

ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ 'ಟ್ರಯಂಫ್ ಆಫ್ ದಿ ಇಂಡಿಯನ್ ರಿಪಬ್ಲಿಕ್: ಮೈ ಲೈಫ್, ಮೈ ಸ್ಟ್ರಗಲ್ಸ್' ಎಂಬ ಆತ್ಮಕಥನವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ನವದೆಹಲಿಯಲ್ಲಿ ಇಂದು ಬಿಡುಗಡೆ ಮಾಡಲಿದ್ದಾರೆ. ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ಬಾಲ್ಯದಿಂದ ಆರಂಭಿಸಿ, ಅವರು ಎದುರಿಸಿದ ಸವಾಲುಗಳು, ಅನುಭವಗಳು, ಸಾಧನೆಗಳು ಹಾಗೂ ಸಾರ್ವಜನಿಕ ಜೀವನದ ಮಹತ್ವದ ಹಂತಗಳನ್ನು ಈ ಆತ್ಮಕಥನ ಒಳಗೊಂಡಿದೆ. ಭಾರತದ ೧೪ನೇ ರಾಷ್ಟ್ರಪತಿಯಾಗಿ ಅವರು ಸಲ್ಲಿಸಿದ ಸೇವೆಯವರೆಗಿನ ಅವರ ಜೀವನ ಪಯಣವನ್ನು ಆತ್ಮಕಥನದಲ್ಲಿ ವಿವರಿಸಲಾಗಿದೆ. ಅವರ ಸಾರ್ವಜನಿಕ ಸೇವೆಯ ಮೇಲೆ ಪ್ರಭಾವ ಬೀರಿದ ಮೌಲ್ಯಗಳು, ಅನುಭವಗಳು ಮತ್ತು ಸಂದರ್ಭಗಳ ಕುರಿತಾದ ಒಳನೋಟಗಳನ್ನು ಸಹ ಪುಸ್ತಕ ಒದಗಿಸುತ್ತದೆ.

<>><><*><><<>

ಮುಂಗಾರು ಮಳೆ ಮುಂದುವರಿದಿದ್ದರೂ ಚಾರ್ ಧಾಮ್ ಯಾತ್ರೆ ಯಾವುದೇ ಅಡಚಣೆಯಿಲ್ಲದೆ ಸಾಗುತ್ತಿದ್ದು, ಯಾತ್ರೆಯ ಎರಡನೇ ಹಂತ ಆರಂಭಗೊಂಡಿರುವ ಹಿನ್ನೆಲೆಯಲ್ಲಿ ಯಾತ್ರಾರ್ಥಿಗಳ ಉತ್ಸಾಹವೂ ಹೆಚ್ಚಾಗಿದೆ. ದೇಶದ ವಿವಿಧ ಭಾಗಗಳಿಂದ ಭಕ್ತರು ಕೇದಾರನಾಥ ಮತ್ತು ಬದರಿನಾಥ ಧಾಮಗಳಿಗೆ ತೆರಳಿ ಪೂಜೆ ಸಲ್ಲಿಸುತ್ತಿದ್ದಾರೆ. ಮಳೆಯ ನಡುವೆಯೂ ಯಾತ್ರೆಯ ವ್ಯವಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಯಾತ್ರಾರ್ಥಿಗಳ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಬದರಿನಾಥ-ಕೇದಾರನಾಥ ದೇವಸ್ಥಾನ ಸಮಿತಿ ಅಧ್ಯಕ್ಷ ಹೇಮಂತ್ ದ್ವಿವೇದಿ ತಿಳಿಸಿದ್ದಾರೆ. ಚಾರ್ ಧಾಮ್ ಯಾತ್ರೆಯು ಉತ್ತರಾಖಂಡದ ನಾಲ್ಕು ಪ್ರಮುಖ ಯಾತ್ರಾ ಸ್ಥಳಗಳಾದ ಕೇದಾರನಾಥ, ಬದರಿನಾಥ, ಗಂಗೋತ್ರಿ ಮತ್ತು ಯಮುನೋತ್ರಿಗಳನ್ನು ಒಳಗೊಂಡಿದೆ. ಈ ನಡುವೆ, ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ನಿನ್ನೆ ಮುಖ್ಯಮಂತ್ರಿ ನಿವಾಸದಿಂದ ಎಲ್ಲ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿ, ಮುಂಗಾರು ಪರಿಸ್ಥಿತಿ, ಚಾರ್ ಧಾಮ್ ಯಾತ್ರೆ, ವಿಪತ್ತು ನಿರ್ವಹಣೆ ಸೇರಿದಂತೆ ವಿವಿಧ ವಿಷಯಗಳ ಕುರಿತು ನಿರ್ದೇಶನ ನೀಡಿದರು.

<>><><*><><<>

ಭಾರತೀಯ ಬಾಹ್ಯಾಕಾಶ ವಿಜ್ಞಾನದ ಪಿತಾಮಹ, ಪದ್ಮವಿಭೂಷಣ ಪುರಸ್ಕೃತ ಡಾ.ವಿಕ್ರಮ್ ಸಾರಾಭಾಯಿ ಅವರ ಜನ್ಮದಿನಾಚರಣೆಯ ಸಂದರ್ಭದಲ್ಲಿ ಅವರಿಗೆ ಲೋಕಸಭಾಧ್ಯಕ್ಷ ಓಂ ಬಿರ್ಲಾ ಗೌರವ ನಮನ ಸಲ್ಲಿಸಿದ್ದಾರೆ. ವಿಜ್ಞಾನ ಎಂಬುದು ಕೇವಲ ಪ್ರಯೋಗಾಲಯಗಳಿಗೆ ಮಾತ್ರ ಸೀಮಿತವಾಗದೆ, ಸಾಮಾನ್ಯ ಜನರ ಜೀವನಮಟ್ಟವನ್ನು ಸುಧಾರಿಸುವ ಮಾಧ್ಯಮವಾಗಬೇಕು ಎಂದು ಡಾ.ಸಾರಾಭಾಯಿ ಬಲವಾಗಿ ನಂಬಿದ್ದರು ಎಂದು ಸ್ಮರಿಸಿದ್ದಾರೆ.

ಅವರ ಈ ದೂರದೃಷ್ಟಿಯ ಚಿಂತನೆಯು ಭಾರತದ ಆಧುನಿಕ ವೈಜ್ಞಾನಿಕ ಸಂಶೋಧನೆಗೆ ಸದೃಢ ಅಡಿಪಾಯ ಹಾಕಿದ್ದಲ್ಲದೆ, ಬಾಹ್ಯಾಕಾಶ ವಿಜ್ಞಾನವನ್ನು ರಾಷ್ಟ್ರ ನಿರ್ಮಾಣದ ಪ್ರಮುಖ ಶಕ್ತಿಯನ್ನಾಗಿ ಪರಿವರ್ತಿಸಿತು ಎಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<>><><*><><<>

ಅರುಣಾಚಲ ಪ್ರದೇಶವು ಭಾರತದ ಬೇರ್ಪಡಿಸಲಾಗದ ಮತ್ತು ಅವಿಭಾಜ್ಯ ಅಂಗವಾಗಿದ್ದು, ಈ ನಿರಾಕರಿಸಲಾಗದ ವಾಸ್ತವವನ್ನು ಯಾವುದೂ ಬದಲಾಯಿಸಲು ಸಾಧ್ಯವಿಲ್ಲ ಎಂದು ಭಾರತ ಪುನರುಚ್ಚರಿಸಿದೆ. ನವದೆಹಲಿಯಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಂಧೀರ್ ಜೈಸ್ವಾಲ್, ಭಾರತ ಮತ್ತು ಚೀನಾ ನಡುವಿನ ಗಡಿ ಪ್ರದೇಶಗಳಿಗೆ ಸಂಬಂಧಿಸಿದಂತೆ, ಎರಡೂ ದೇಶಗಳ ದ್ವಿಪಕ್ಷೀಯ ಬಾಂಧವ್ಯದ ಒಟ್ಟಾರೆ ಅಭಿವೃದ್ಧಿಗೆ ಗಡಿ ಭಾಗದಲ್ಲಿ ಶಾಂತಿ ಹಾಗೂ ಸೌಹಾರ್ದತೆಯನ್ನು ಕಾಯ್ದುಕೊಳ್ಳುವುದು ಅತ್ಯಂತ ಅಗತ್ಯ ಎಂಬುದನ್ನು ನವದೆಹಲಿ ಯಾವಾಗಲೂ ಪ್ರತಿಪಾದಿಸುತ್ತದೆ ಎಂದು ಸ್ಪಷ್ಟಪಡಿಸಿದರು.

<>><><*><><<>

ನೈಜೀರಿಯಾದ ಲೇಗೋಸ್‌ನಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಫೆನ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಪಟುಗಳು ತಮ್ಮ ಭರ್ಜರಿ ಪ್ರದರ್ಶನವನ್ನು ಮುಂದುವರಿಸಿದ್ದಾರೆ. ಮೊದಲ ದಿನ ೧೭ ಪದಕಗಳನ್ನು ಜಯಿಸಿದ್ದ ಭಾರತೀಯ ಫೆನ್ಸರ್‌ಗಳು, ನಂತರದ ಸ್ಪರ್ಧೆಗಳಲ್ಲೂ ಪದಕ ಬೇಟೆ ಮುಂದುವರಿಸಿದ್ದಾರೆ. ಹಿರಿಯರ ಪುರುಷರ ವಿಭಾಗದ ಸೇಬರ್ ಫೈನಲ್‌ನಲ್ಲಿ ಕರಣ್ ಸಿಂಗ್ ಆಸ್ಟ್ರೇಲಿಯಾದ ಯೂಂಗಿ ಶಿಮ್ ವಿರುದ್ಧ ೧೫-೧೨ ಅಂತರದಿಂದ ರೋಚಕ ಗೆಲುವು ಸಾಧಿಸಿ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಈಪಿ ವಿಭಾಗದಲ್ಲಿ ಶೆರ್ಜಿನ್ ಶಾಂತಿಮೋಲ್ ದಕ್ಷಿಣ ಆಫ್ರಿಕಾದ ಪೀಟರ್ ಕ್ರೂಗರ್ ವಿರುದ್ಧ ೧೫-೬ ಅಂತರದ ಸುಲಭ ಗೆಲುವು ದಾಖಲಿಸಿ ಚಿನ್ನ ಗೆದ್ದುಕೊಂಡರು. ಇದೇ ವೇಳೆ ಫೋಯಿಲ್ ವಿಭಾಗದಲ್ಲಿ ತೇಜಸ್ ಪಾಟೀಲ್ ಕಂಚಿನ ಪದಕ ಪಡೆದರು. ಮಹಿಳೆಯರ ವಿಭಾಗದಲ್ಲೂ ಭಾರತೀಯ ಸ್ಪರ್ಧಿಗಳು ಅಧಿಪತ್ಯ ಸಾಧಿಸಿದ್ದು, ಈಪಿ ವಿಭಾಗದಲ್ಲಿ ತನಿಷ್ಕಾ ಖತ್ರಿ ಚಿನ್ನ, ಖುಷಿ ದಾಭಡೆ ಬೆಳ್ಳಿ ಹಾಗೂ ಪ್ರಾಚಿ ಲೋಹನ್ ಕಂಚಿನ ಪದಕ ಪಡೆದರು. ಇನ್ನು ಮಹಿಳೆಯರ ವೈಯಕ್ತಿಕ ಸೇಬರ್ ವಿಭಾಗದಲ್ಲಿ ಆಖರಿ, ಬೆಳ್ಳಿ ಪದಕ ಜಯಿಸಿದರೆ, ಶ್ರುತಿ ಜೋಶಿ ಮತ್ತು ಜೆಫಾರ್ಲಿನ್ ಕಂಚಿನ ಪದಕಗಳಿಗೆ ಭಾಜನರಾಗಿದ್ದಾರೆ.

<>><><*><><<>

ಕ್ಯಾನ್ಸರ್ ರೋಗವನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಲು ಹಾಗೂ ರೋಗಿಗಳಿಗೆ ಸರಿಯಾದ ಚಿಕಿತ್ಸೆ ಮತ್ತು ಆರೈಕೆ ಸಿಗುವಂತೆ ಮಾಡಲು, ದೇಶದ ಉಳಿದ ೧೯ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಕ್ಯಾನ್ಸರ್ ಅನ್ನು 'ಅಧಿಸೂಚಿತ ಕಾಯಿಲೆ' ಎಂದು ಘೋಷಿಸುವಂತೆ ಸುಪ್ರೀಂ ಕೋರ್ಟ್ ಸೂಚಿಸಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ  ><><<>